# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

ಆಂಗ್ಲ ಮೂಲ : **ಮೇರಿ ಲೂಯಿ ಬರ್ಕ್** ಸಂಗ್ರಹಾನುವಾದ : **ಸ್ವಾಮಿ ವೀರೇಶಾನಂದ**

## ಭಾಗ ೨೭

### ಅವಿರತ ವಿರೋಧದ ನಡುವೆ (ಹಿಂದಿನ ಸಂಚಿಕೆಯಿಂದ)

**ಸ್ವಾ**ಮಿ ವಿವೇಕಾನಂದರು ಡೆಟ್ರಾಯ್ಟ್ ನಗರವನ್ನು ಫೆಬ್ರವರಿ ೨೩, ೧೮೯೪ರಂದು ಬಿಟ್ಟು ತೆರಳಿದರು. ಆದರೂ ಅವರ ವಿರೋಧಿಗಳ ಅಟ್ಟಹಾಸ ಮುಂದುವರಿದೇ ಇತ್ತು. ಸ್ವಾಮೀಜಿಯವರು ಆ ನಗರದಲ್ಲಿ ಗಳಿಸಿದ ಪ್ರಸಿದ್ಧಿಯನ್ನು ಕೆಲವು ಕಟ್ಟಾ ಕ್ರೈಸ್ತ ಸಂಪ್ರದಾಯಸ್ಥ ಮಿಷನರಿಗಳಿಗೆ ಸಹಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಸ್ವಾಮೀಜಿಯವರ ಉದಾರ ಚಿಂತನೆಗಳು ಮತ್ತು ಕ್ರೈಸ್ತಧರ್ಮದ ಕಟು ವಿಮರ್ಶೆಗಳು ಅವರಿಗೆ ಸಹ್ಯವಾಗಲಿಲ್ಲ. ಹೀಗಾಗಿ ಭಾರತದ ಜನ ಮತ್ತು ಅವರ ಧರ್ಮದ ಬಗ್ಗೆ ಅಪಪ್ರಚಾರವನ್ನು ಅವರು ಮುಂದುವರಿಸಿದರು. ಮಾತ್ರವಲ್ಲದೆ, ಸ್ವಾಮಿ ವಿವೇಕಾನಂದರ ಮೇಲೆ, ಅವರ ಅನುಪಸ್ಥಿತಿಯಲ್ಲಿಯೂ ಕೂಡ, ನಿಂದನೆಗಳ ಮಳೆಯನ್ನೇ ಸುರಿಸಿದರು.



ಡೆಟ್ರಾಯ್ಟ್ ನಗರದ ಕೆಲವು ಪತ್ರಿಕೆಗಳು ಕೂಡ ಇದರಲ್ಲಿ ಭಾಗಿಯಾದವು. ಸ್ವಾಮೀಜಿ ತೆರಳಿದ ದಿನದಿಂದ ಹತ್ತುಹಲವು ದಿನಗಳ ಕಾಲ, ನಗರದ ಪ್ರತಿಯೊಂದು ಧಾರ್ಮಿಕ ಸಭೆಯಲ್ಲಿಯೂ ಸ್ವಾಮೀಜಿಯ ಭಾಷಣದ ವಿಮರ್ಶೆಯನ್ನು ಮಾಡಲಾಯಿತು; ಅವರ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಕೂಡ ಮಾಡಲಾಯಿತು. ಹಲವಾರು ಕ್ರೈಸ್ತ ಉಪದೇಶಕರು ತಮ್ಮ ಭಾನುವಾರದ ಧಾರ್ಮಿಕ ಪ್ರವಚನವನ್ನು ಸ್ವಾಮೀಜಿಯವರ ಮೇಲೆ ಗದಾಪ್ರಹಾರ ಮಾಡುವುದಕ್ಕೆಂದೇ ಉಪಯೋಗಿಸಿಕೊಂಡರು. ಸ್ವಾಮೀಜಿಯವರು ತಮ್ಮ ಆಧ್ಯಾತ್ಮಿಕ ಔನ್ನತ್ಯ, ಅಗಣಿತ ಪಾಂಡಿತ್ಯ ಮತ್ತು ಶ್ರೇಷ್ಠ ವಾಗ್ಮಿತೆಗಳಿಂದ ಗಳಿಸಿಕೊಂಡ ಪ್ರತಿಷ್ಠೆಯನ್ನು ಹೇಗಾದರೂ ಮಾಡಿ ಹಾಳುಗೆಡವಬೇಕೆಂದು ಎಲ್ಲ ರೀತಿಯ ಉಪಾಯವನ್ನೂ ಸಾಂಪ್ರದಾಯಿಕರು ಮಾಡಿದರು.

ಮೊದಲನೆಯದಾಗಿ, ಭಾರತವು ನೈತಿಕಪ್ರಜ್ಞೆಯಿರುವ ಜನರು ಇರುವ ದೇಶವೆಂದು ಸ್ವಾಮೀಜಿ ಬಿಂಬಿಸಿದ್ದರು. ಇದರ ವಿರುದ್ಧ ಕ್ರೈಸ್ತ ಪಾದ್ರಿಗಳು ಹರಿಹಾಯ್ದರು. ಭಾರತವು ಹಿಂದಿನ ಕಾಲದಿಂದಲೂ ಒಂದು ಅನೈತಿಕ ದೇಶ; ಅದು ಈಗ ಅಧೋಗತಿಯನ್ನು ಕಂಡಿದೆ ಎಂದು ವಾದಿಸಿದರು. ಸ್ವಾಮೀಜಿಯವರು ಕ್ರೈಸ್ತಧರ್ಮೀಯರು ಮಾಡುವ ಪ್ರಾರ್ಥನೆಯ ಬಗ್ಗೆ ಟೀಕೆ ಟಿಪ್ಪಣಿಗಳನ್ನು ಮಾಡಿದ್ದರು. ಅದನ್ನು ರಚನಾತ್ಮಕವಾಗಿ ಸ್ವೀಕರಿಸದೆ, ಒಬ್ಬ ಬ್ಯಾಪ್ಟಿಸ್ಟ್ ಪಾದ್ರಿಯು ಹೀಗೆ ನುಡಿದನು: ''ವಿವೇಕಾನಂದ ಮತ್ತು ಆತನ ಜನರು ಪ್ರಾರ್ಥನೆಯನ್ನೇ ಮಾಡುವುದಿಲ್ಲ. ಅವರ ದೇವರಾದ ಬ್ರಹ್ಮನಿಗೆ ಯಾವ ಗುಣಗಳೂ ಇಲ್ಲ; ಪ್ರಾರ್ಥನೆಯನ್ನು ಕೇಳುವುದಕ್ಕೆ ಕಿವಿಗಳೂ ಇಲ್ಲ.''

ಸೆಂಟ್ರಲ್ ಕ್ರಿಸ್ಟಿಯನ್ ಚರ್ಚಿನ ನ್ಯೂಮ್ಯಾನ್ ಎನ್ನುವ ಪಾದ್ರಿಯು ತನ್ನ ಭಾನುವಾರದ ಪ್ರಾರ್ಥನಾಸಭೆಯಲ್ಲಿ ಹೀಗೆ ನುಡಿದನು:

''ವಿವೇಕಾನಂದರು ತಮ್ಮ ಅಭಿಪ್ರಾಯಗಳನ್ನು ಹೊಂದಿರುವುದಕ್ಕೆ ನಮ್ಮ ಆಕ್ಷೇಪವೇನೂ ಇಲ್ಲ. ಆದರೆ ಅವರ ಅಭಿಪ್ರಾಯಗಳು ಹಿಂದೂಧರ್ಮವನ್ನಾಗಲಿ, ಭಾರತವನ್ನಾಗಲಿ ಸರಿಯಾಗಿ ಪ್ರತಿನಿಧಿಸುತ್ತವೆ ಎಂದು ನಾವು ಒಪ್ಪಿಕೊಳ್ಳುವುದಿಲ್ಲ.'' ಇದಲ್ಲದೆ,

ಡಾ. ಮೋರಿ ಎಂಬ ಕ್ರೈಸ್ತಪಾದ್ರಿಯು ಸ್ವಾಮಿ ವಿವೇಕಾನಂದರು ಭಾರತ ಮತ್ತು ಹಿಂದೂಧರ್ಮದ ಬಗ್ಗೆ ಬರಿ ಅರ್ಧಸತ್ಯಗಳನ್ನು ಮಾತ್ರವೇ ಹೇಳುತ್ತಿದ್ದಾರೆ ಎಂದು ಆಪಾದಿಸಿದನು.

ಹೀಗೆ ಹಲವಾರು ಕ್ರೈಸ್ತ ಸಂಘಟನೆಗಳು ಸ್ವಾಮೀಜಿಯವರ ಬಗ್ಗೆ ಕಟುವಾದ ಟೀಕೆಯನ್ನು ಮಾಡುತ್ತಿದ್ದವು. ಇದಲ್ಲದೆ ಭಾರತದಲ್ಲಿ ಕ್ರೈಸ್ತಧರ್ಮದ ಪ್ರಸಾರವನ್ನು ಮಾಡುತ್ತಿದ್ದ ಮಿಷನರಿಗಳನ್ನು ಕರೆಸಿ, ಅವರಿಂದ ಭಾಷಣಗಳನ್ನು ಮಾಡಿಸಲಾಯಿತು. ಅಂಥವರಲ್ಲಿ ಒಬ್ಬನಾದ ಥ್ಯಾಕ್‌ವೆಲ್ ಎನ್ನುವವನು ೪೫ ವರ್ಷಗಳ ಕಾಲ ಭಾರತದಲ್ಲಿ ಮಿಷನರಿ ಕೆಲಸವನ್ನು ಮಾಡಿದ್ದನು. ಆತನು ಭಾರತದಲ್ಲಿ ನಡೆಯುತ್ತಿರುವ ಮಿಷನರಿ ಕೆಲಸವು ಅತ್ಯಂತ ಉದಾತ್ತವಾದ ಕಾರ್ಯ ಎಂದು ಅಮೆರಿಕದ ಜನರ ಮುಂದೆ ಬಣ್ಣಿಸಿದನು.

ಆದರೆ ಕ್ರೈಸ್ತಪಾದ್ರಿಗಳ ಈ ಪ್ರತಿರೋಧವನ್ನು ಖಂಡಿಸಿ, ಕೆಲವು ಪತ್ರಗಳು ಪತ್ರಿಕೆಗಳಲ್ಲಿ ಪ್ರಕಟವಾದವು. ಜೆ ಸ್ಟೀಲೆ ಎಂಬುವವರು ತಮ್ಮ ಒಂದು ಪತ್ರದಲ್ಲಿ ಹೀಗೆ ಬರೆಯುತ್ತಾರೆ:

''ಸ್ವಾಮಿ ವಿವೇಕಾನಂದರನ್ನು ಜರೆಯುವಂತಹ ಅನೇಕ ಪ್ರಯತ್ನಗಳನ್ನು ಕ್ರೈಸ್ತ ಮಿಷನರಿಗಳು ಮಾಡುತ್ತಿದ್ದಾರೆ. ಅಂಥ ಒಂದು ಸಭೆಯು ಶ್ರೀಮತಿ ಶೆಲ್ಡನ್ ಅವರ ಮನೆಯಲ್ಲಿ ನಡೆಯಿತು. ಅಲ್ಲಿ ಭಾರತದಲ್ಲಿ ಮಿಷನರಿಯಾಗಿದ್ದ ಥ್ಯಾಕ್‌ವೆಲ್ ಎನ್ನುವವರು ಮಾತನಾಡಿದರು. ಭಾರತದಲ್ಲಿ ಪ್ರಚಲಿತವಿದ್ದ ವಿಧವೆಯರನ್ನು ಜೀವಂತ ಸುಡುವ ಪದ್ಧತಿಯನ್ನು ನಿರ್ಮೂಲನಗೊಳಿಸಿದ್ದು ನಾವೇ ಎಂದು ಕ್ರೈಸ್ತ ಸಂನ್ಯಾಸಿಗಳು ಹೇಳಿಕೊಳ್ಳುತ್ತಾರೆ. ಆದರೆ ಆ ದೇಶದಲ್ಲಿಯೇ, ಗಂಗಾನದಿಯ ತಟದಲ್ಲಿ ಹುಟ್ಟಿ ಬೆಳೆದ, ಅಲ್ಲಿಯೇ ತನ್ನ ಇಡೀ ಜೀವಿತಕಾಲವನ್ನು ಕಳೆದ ವಿದ್ವಾಂಸನಾದ ಹಿಂದೂ ಸಂನ್ಯಾಸಿಯು ಭಾರತೀಯರೇ ಈ ಅನಿಷ್ಟ ಪದ್ಧತಿಯನ್ನು ನಿವಾರಿಸಿಕೊಂಡರು ಎನ್ನುತ್ತಾರೆ.

''ಇದಲ್ಲದೆ, ನಾವು ಯುವಕರಾಗಿದ್ದಾಗಿನಿಂದ, ಹಿಂದೂ ತಾಯಂದಿರು ಗಂಗಾನದಿಗೆ ಮೊಸಳೆಗಳನ್ನು ಹಾಕುತ್ತಾರೆ ಎಂದು ಕೇಳಿದ್ದೆವು. ಆದರೆ ಆ ನದಿಯ ದಂಡೆಯಲ್ಲಿಯೇ ಹುಟ್ಟಿಬೆಳೆದ ಸಂನ್ಯಾಸಿಯು ಗಂಗೆಯಲ್ಲಿ ಮೊಸಳೆಯೇ ಇಲ್ಲ ಎಂದು ಹೇಳುತ್ತಾರೆ. ಹೀಗಾಗಿ ಥ್ಯಾಕವೆಲ್ ಹೇಳಿದಂತೆ ಹಿಂದೂ ತಾಯಂದಿರು ತಮ್ಮ ಮಕ್ಕಳ ಕತ್ತು ಹಿಸುಕಿ ಕೊಲ್ಲುತ್ತಾರೆ ಎನ್ನುವ ಮಾತಿಗೆ ಯಾವ ಸತ್ಯದ ಆಧಾರವೂ ಇಲ್ಲ ಎಂದೇ ಹೇಳಬೇಕಾಗುತ್ತದೆ.

''ಭಾರತದ ಜನರನ್ನು ಕ್ರೈಸ್ತಧರ್ಮಕ್ಕೆ ಮತಾಂತರಗೊಳಿಸಲು ಬಹಳಷ್ಟು ಹಣ ಖರ್ಚಾಗುತ್ತದೆ. ಅದನ್ನು ಸಂಗ್ರಹಿಸಲು ಎಲ್ಲ ಪ್ರಯತ್ನಗಳನ್ನೂ ಮಾಡಲಾಗುತ್ತಿದೆ. ಭಾನುವಾರದ ತರಗತಿಗಳಲ್ಲಿ ಭಾಗವಹಿಸುವ ಮಕ್ಕಳ ಕೈಯಲ್ಲೂ ಕೂಡ ದೇಣಿಗೆಗಳನ್ನು ಸಂಗ್ರಹಿಸಲಾಗುತ್ತಿದೆ. ಪ್ರಾರ್ಥನಾ ಸಭೆಗಳ ಮೂಲಕವೂ ಧನ ಸಂಗ್ರಹಣೆ ನಡೆಯುತ್ತಿದೆ. ಬಲಾತ್ಕಾರದ ಮೂಲಕ ಹಾಗೂ ಕನಿಕರವನ್ನು ಉತ್ಪಾದಿಸುವ ಮೂಲಕವೂ ಅನೈತಿಕವಾಗಿ ದೇಣಿಗೆಗಳನ್ನು ಸಂಗ್ರಹಿಸಲಾಗುತ್ತಿದೆ.

''ಇಡೀ ಪ್ರಪಂಚದಲ್ಲಿ ಎಲ್ಲಿಯಾದರೂ ಮಿಷನರಿ ಕೆಲಸದ ಆವಶ್ಯಕತೆ ಇದ್ದರೆ, ಅದು ಮೊಟ್ಟಮೊದಲನೆಯದಾಗಿ, ಅಮೆರಿಕದಲ್ಲಿಯೇ ಪ್ರಾರಂಭವಾಗಬೇಕು. ಬೋಸ್ಟನ್, ಚಿಕಾಗೋ ಮತ್ತು ನ್ಯೂಯಾರ್ಕ್ ನಗರಗಳಲ್ಲಿ ಮಿಷನರಿ ಕಾರ್ಯ ನಡೆಯಬೇಕು. ಮೊದಲು ಈ ದೇಶದ ಕ್ರೈಸ್ತ ಧಾರ್ಮಿಕ ಸಂಸ್ಥೆಗಳಿಗೆ ನಿಜವಾದ ಕ್ರೈಸ್ತ ಮೌಲ್ಯಗಳಾದ ನ್ಯಾಯ, ಧರ್ಮ ಮತ್ತು ಸಹೋದರ ಭ್ರಾತೃತ್ವಗಳ ಮೊದಲ ಪಾಠಗಳನ್ನು ಹೇಳಿಕೊಡಬೇಕು.''

ಏತನ್ಮಧ್ಯೆ ಕ್ರೈಸ್ತ ಮಿಷನರಿಗಳ ವಿದ್ಯಾರ್ಥಿ ಆಂದೋಲನ ಎಂಬ ಸಂಸ್ಥೆಯು ತನ್ನ ಎರಡನೆಯ ಅಂತರರಾಷ್ಟ್ರೀಯ ಸಮಾವೇಶವನ್ನು ಡೆಟ್ರಾಯ್ಟ್ ನಗರದಲ್ಲಿ ಭವ್ಯವಾಗಿ ಆಚರಿಸಿತು. ಸ್ವಾಮೀಜಿ ಆಗತಾನೇ ಆ ನಗರವನ್ನು ಬಿಟ್ಟು ತೆರಳಿದ್ದರು, ಅಷ್ಟೇ. ಫೆಬ್ರುವರಿ ೨೮, ೧೮೯೪ ರಿಂದ ಹಿಡಿದು, ಮಾರ್ಚ್ ೪, ೧೮೯೪ ರ ನಡುವೆ ನಡೆದ ಈ ಬೃಹತ್ ಸಮಾವೇಶದಲ್ಲಿ ೨೯೪ ಸಂಸ್ಥೆಗಳಿಗೆ ಸೇರಿದ ೧,೧೮೭ ಯುವಜನರು ಸೇರಿದ್ದರು. ಅವರು ಕ್ರೈಸ್ತಧರ್ಮದ ೩೮ ವಿವಿಧ ಪಂಗಡಗಳಿಗೆ ಸೇರಿದ್ದರು. ಇದಲ್ಲದೆ, ವಿವಿಧ ಮಿಷನರಿ ಸಂಸ್ಥೆಗಳಿಗೆ ಸೇರಿದ ೫೦ ಕಾರ್ಯದರ್ಶಿಗಳು, ೫೦ ಜನ ಹಿಂದೆ ಮಿಷನರಿಗಳಾಗಿ ಕೆಲಸ ಮಾಡಿದವರು ಮತ್ತಿತರ ಸಂಸ್ಥೆಗಳ ಪ್ರತಿನಿಧಿಗಳು ಕೂಡ ಸಮಾವೇಶಗೊಂಡಿದ್ದರು.

ಈ ಬೃಹತ್ ಸಮ್ಮೇಳನವನ್ನು ಅದ್ಭುತವಾದ ಸಮಾಗಮ ಎಂದು ಪತ್ರಿಕೆಗಳು ಬಣ್ಣಿಸಿದವು. ಇದಲ್ಲದೆ ಸ್ವಾಮಿ ವಿವೇಕಾನಂದರ ಕ್ರೈಸ್ತಧರ್ಮ ವಿರೋಧಿ ಹೇಳಿಕೆಗಳಿಗೆ ಡೆಟ್ರಾಯ್ಟ್ ನಗರದ ಜನರು ನೀಡಿರುವ ತಕ್ಕ ಪ್ರತ್ಯುತ್ತರ ಎಂದೂ ಈ ಸಮ್ಮೇಳನವನ್ನು ಬಿಂಬಿಸಲಾಯಿತು. ಇಲ್ಲಿ ನೀಡಲಾದ ಭಾಷಣಗಳಲ್ಲಿ ಸ್ವಾಮಿ ವಿವೇಕಾನಂದರ ವಿರುದ್ಧವಾಗಿ ಏನನ್ನು ಹೇಳಲಾಯಿತು ಎಂದು ತಿಳಿದುಬಂದಿಲ್ಲ. ಆದರೆ, ಕ್ರೈಸ್ತ ಮಿಷನರಿಗಳ ಹುಳುಕುಗಳನ್ನು ಎತ್ತಿತೋರಿಸಿದ  ಸ್ವಾಮಿ ವಿವೇಕಾನಂದರ ಪ್ರಭಾವವನ್ನು ನಿರ್ಮೂಲಗೊಳಿಸುವ ಪ್ರಯತ್ನವಿದು ಎಂಬ ಭಾವನೆಯನ್ನು ಎಲ್ಲೆಡೆ ಬಿತ್ತಲಾಯಿತು.

ಆದರೆ ಈ ಸಮ್ಮೇಳನದ ಮೂಲಭೂತ ಧ್ಯೇಯೋದ್ದೇಶಗಳನ್ನು ಟೆಟ್ರಾಯ್ಟ್ ನಗರದ ಕೆಲವು ಪ್ರಬುದ್ಧ ನಾಗರಿಕರು ಪ್ರಶ್ನಿಸಿದರು. ಈ ಸಮ್ಮೇಳನವು ಕ್ರೈಸ್ತಧರ್ಮದ ತತ್ತ್ವಗಳನ್ನು ಚಿಂತಿಸುವ ಸಮ್ಮೇಳನವಾಗಿತ್ತೋ, ಇಲ್ಲವೇ ಮಿಷನರಿಗಳ ಕಾರ್ಯಕ್ಕಾಗಿ ಹಣಸಂಗ್ರಹಿಸುವ ಸೋಗು ಮಾತ್ರವಾಗಿತ್ತೋ ಎಂದು ಮುಕ್ತವಾಗಿ ಪ್ರತಿಷ್ಠಿತ ಜನರು ಪ್ರಶ್ನಿಸಿದರು.

ಸ್ವಾಮಿ ವಿವೇಕಾನಂದರು ಮೂರು ವಾರಗಳ ತಮ್ಮ ಅನುಪಸ್ಥಿತಿಯ ನಂತರ ಮತ್ತೆ ಡೆಟ್ರಾಯ್ಟ್ ನಗರಕ್ಕೆ ೧೮೯೪ರ ಮಾರ್ಚ್ ೯ರಂದು ಹಿಂದಿರುಗಿ ಬಂದರು. ಮಿಷನರಿಗಳ ಅಪಪ್ರಚಾರ

ದಿಂದ ಕಂಗೆಟ್ಟಿದ್ದ ಸ್ವಾಮೀಜಿಯವರ ಸಮರ್ಥಕರು ಸ್ವಾಮಿ ವಿವೇಕಾನಂದರನ್ನು ಸ್ವಾಗತಿಸಿ, ಹಲವು ಪತ್ರಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದರು. ಅವುಗಳ ತಲೆಬರಹಗಳು ಹೀಗಿದ್ದವು:

ಮಿಥ್ಯಾಚಾರಿಗಳು ಕ್ರೈಸ್ತಧರ್ಮದಲ್ಲಿ ಅಂಥವರು ಹಲವರಿದ್ದಾರೆ. ಅವರು ತಮ್ಮ ತಲೆಗಳನ್ನು ಧಾರ್ಮಿಕ ಪೋಷಾಕುಗಳಲ್ಲಿ ಅಡಗಿಸಿಕೊಂಡಿದ್ದಾರೆ.

ಹಿಂದೂ ಸಂನ್ಯಾಸಿಯಾದ ಸ್ವಾಮಿ ವಿವೇಕಾನಂದರಿಗೆ ಜಯವಾಗಲಿ !

ಪ್ರತಿಷ್ಠಿತ ಲೇಖಕರೊಬ್ಬರು ಸ್ವಾಮಿ ವಿವೇಕಾನಂದರಿಗೆ ಮಾಡುತ್ತಿರುವ ಅಪಚಾರದ ಬಗ್ಗೆ ಕಟುವಾಗಿ ವಿಮರ್ಶಿಸಿದ್ದಾರೆ.

ಕೆಲವು ಸತ್ಯ ತಥ್ಯಗಳನ್ನು ಅರಗಿಸಿಕೊಳ್ಳುವುದು ನಿಜವಾಗಿಯೂ ಕಷ್ಟ !

ಮೇಲಿನ ತಲೆಬರಹಗಳಿಂದ ಆರಂಭಗೊಂಡ ಲೇಖನದ ಕೆಲ ಅಂಶಗಳು ಹೀಗಿದ್ದವು:

**ಸ್ವಾಮಿ ವಿವೇಕಾನಂದರಿಗೆ ಒಂದು ಮುಕ್ತ ಪತ್ರ**

''ನಾವೀಗ ಡೆಟ್ರಾಯ್ಟಿನಲ್ಲಿ ಪರಧರ್ಮೀಯರನ್ನು ಜೀವಂತವಾಗಿ ಸುಡುವುದನ್ನು ಪ್ರತಿಪಾದಿಸುವರ ಮಧ್ಯೆ, ಈ ಹತ್ತೊಂಬತ್ತನೆಯ ಶತಮಾನದ ಕಾಲದಲ್ಲಿಯೂ ಇದ್ದೇವೆ. ನಮಗೆ ಖಂಡಿತವಾಗಿಯೂ ಭಾರತದಿಂದ ಬರುವ ಮಿಷನರಿಗಳು ಬೇಕೇಬೇಕು. ನಾವು ಅವರಿಗೆ ಶುಭವನ್ನು ಬಯಸುತ್ತೇವೆ. ನಮ್ಮ ಮಿಷನರಿಗಳು ಮಾಡಿರುವ ಕೆಡಕು ಇನ್ನು ಸಾಕು. ನಿಮ್ಮ ಧರ್ಮವು ಸಾವಿರಾರು ವರ್ಷಗಳಿಂದ ಅನುಕಂಪ ಮತ್ತು ಪ್ರೇಮವನ್ನು ಪ್ರತಿಪಾದಿಸುತ್ತ ಬಂದಿದೆ. ವಿನಯ ಭಾವನೆ ಮತ್ತು ಸತ್ಯಗಳನ್ನು ಎತ್ತಿಹಿಡಿಯುತ್ತದೆ. ಹಾಗೂ ನಿಮ್ಮ ಧರ್ಮವು ವಿಜ್ಞಾನ, ತರ್ಕ ಮತ್ತು ನ್ಯಾಯಗಳ ಆಧಾರದ ಮೇಲೆ ನಿಂತಿದೆ. ಆದರೆ ನಮ್ಮ ಧರ್ಮವಾದರೋ ಮತಾಂಧತೆಯ, ಧಾರ್ಮಿಕ ಶೋಷಣೆಯ, ಯುದ್ಧಗಳ, ರಕ್ತಪಿಪಾಸುವಿನ ಮತ್ತು ದ್ವೇಷದ ಬೀಡಾಗಿಬಿಟ್ಟಿದೆ. ನಮ್ಮ ಮತವಾದರೋ ಸುಳ್ಳು ಮತ್ತು ಕಟ್ಟುಕಥೆಯ ಹಂದರವಾಗಿಬಿಟ್ಟಿದೆ.''

ಮೇಲಿನ ಲೇಖನವನ್ನು ಬರೆದವರು ಡೆಲ್‌ಡಾಕ್ ಎನ್ನುವವರು. ಅದು ಅವರ ಕಾವ್ಯನಾಮವಾಗಿದ್ದರಬೇಕು. ಅವರು ಮುಂದುವರಿದು, ಅಮೆರಿಕ ನಾಗರಿಕತೆಯ ದೋಷಗಳನ್ನು ಬಹುವಾಗಿ ಎತ್ತಿ ತೋರಿಸುತ್ತಾರೆ.

ಸ್ವಾಮೀಜಿಯವರ ವಿರೋಧಿಗಳ ಟೀಕೆಟಿಪ್ಪಣಿಗಳು ಕೂಡ ಅವ್ಯಾಹತವಾಗಿ ನಡೆದೇ ಇತ್ತು. ಸ್ವಾಮೀಜಿಯವರನ್ನು, ಹಿಂದೂ ಧರ್ಮವನ್ನು ಮತ್ತು ಭಾರತದ ಜನಗಳನ್ನು ಟೀಕಿಸುವ, ಹೀಗಳೆಯುವ ಪತ್ರಗಳು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದವು. ಫ್ರೀ ಪ್ರೆಸ್ ಪತ್ರಿಕೆಯಲ್ಲಿ ಅಂಥ ಒಂದು ಪತ್ರ ಪ್ರಕಟವಾಯಿತು. ಇದರಲ್ಲಿ ಸ್ವಾಮೀಜಿಯವರನ್ನಲ್ಲದೆ, ಸ್ವಾಮೀಜಿಯವರನ್ನು ಸಮರ್ಥಿಸಿಕೊಂಡ ಅಮೆರಿಕನ್ನರನ್ನೂ ಕಟುವಾಗಿ ನಿಂದಿಸಲಾಗಿತ್ತು. ಈ ಪತ್ರವಂತೂ ಯಾವುದೇ ಮಾಪನದ ಮೂಲಕ ನೋಡಿದರೂ, ಕೀಳುಮಟ್ಟದ ರುಚಿಯುಳ್ಳದ್ದಾಗಿತ್ತು.

ಒಂದಂದೂ ಸ್ಪಷ್ಟವಾಗಿತ್ತು. ಸ್ವಾಮಿ ವಿವೇಕಾನಂದರ ಎರಡನೆಯ ಭೇಟಿಯನ್ನು ಡೆಟ್ರಾಯ್ಟ್ ನಗರದ ಎಲ್ಲರೂ ಸ್ವಾಗತಿಸುತ್ತಿರಲಿಲ್ಲ. ಅವರನ್ನು ದ್ವೇಷಿಸುವ, ನಿಂದಿಸುವ ಬಹಳಷ್ಟು ಜನರು ಇದ್ದರು. ಇಂಥ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಸ್ವಾಮಿ ವಿವೇಕಾನಂದರು ಡೆಟ್ರಾಯ್ಟ್ ನಗರಕ್ಕೆ ಹಿಂತಿರುಗಿದರು.

*(ಮುಂದುವರಿಯುವುದು)*

## ಶ್ರೀಮಾತೆಯವರ ಉಪದೇಶಗಳು



❋ **ಶಿಷ್ಯ :** ನಾನೇನೋ ಜಪ ಮಾಡುತ್ತೇನೆ. ಆದರೆ ಮನಸ್ಸು ಒಂದೆಡೆ ನಿಲ್ಲುತ್ತಿಲ್ಲ.

**ಶ್ರೀಮಾತೆ :** ಮನಸ್ಸು ನಿಲ್ಲಲಿ ಬಿಡಲಿ – ಜಪವನ್ನಂತೂ ಮಾಡು. ಪ್ರತಿದಿನವೂ ಇಷ್ಟು ಅಂತ ಜಪ ಮಾಡಬಹುದಾದರೆ ಅದರಿಂದ ಒಳ್ಳೆಯದಾದೀತು.

❋ **ಶಿಷ್ಯ :** ಅಮ್ಮಾ, ನೀವೇ ಯಾರಿಗೆ ಗುರುವಾಗಿದ್ದೀರೋ, ಅವರಿಗೆ ಸಾಧನೆ–ಭಜನೆ ಅಗತ್ಯವೆ?

**ಶ್ರೀಮಾತೆ :** ಅದೇನೋ ಸರಿ. ಆದರೂ ನೋಡು, ಅಡುಗೆಗೆ ಬೇಕಾದ ಸಾಮಾನುಗಳೆಲ್ಲ ಕೋಣೆಯಲ್ಲಿವೆ; ಅಡುಗೆ ಮಾಡಿ ಊಟ ಮಾಡಬೇಕು. ಯಾರು ಬೇಗನೆ ಅಡುಗೆ ಮಾಡುವರೋ, ಅವರು ಬೇಗನೆ ಊಟ ಮಾಡುತ್ತಾರೆ. ಇನ್ನು ಕೆಲವರು ಸಾಯಂಕಾಲ ಊಟ ಮಾಡುತ್ತಾರೆ. ಕೆಲವರು ಆಲಸ್ಯದಿಂದ ಅಡುಗೆ ಮಾಡಬೇಕಲ್ಲಾ ಎಂದು ಉಪವಾಸವಿರುತ್ತಾರೆ.

❋ ಯಾರು ಹೆಚ್ಚು ಸಾಧನೆ, ಭಜನೆ ಮಾಡುವರೋ ಅವರು ಅಷ್ಟೇ ಬೇಗನೆ ಭಗವಂತನ ದರ್ಶನ ಪಡೆಯುವರು. ಅದೂ ಸಾಧ್ಯವಿಲ್ಲದಿದ್ದರೆ ಅವರು ತಮ್ಮ ಕೊನೆಗಾಲದಲ್ಲಿ ಖಂಡಿತ ಅವನ ದರ್ಶನ ಪಡೆಯುವರು. ಆದರೆ ಯಾರು ಸಾಧನೆ, ಭಜನೆ ಮಾಡದೆ ಸುಮ್ಮನೆ ಗದ್ದಲವೆಬ್ಬಿಸುತ್ತಾರೋ ಅವರಿಗೆ ತುಸು ತಡವಾಗುವುದು.

*('ಶ್ರೀಶಾರದಾದೇವಿ ವಚನವೇದ', ಪು.೪೪೪–೪೬)*